ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ–63, ನವನಗರ, ಬಾಗಲಕೋಟೆ–03
Tel:08354-297330

ಸ್ವಾತಂತ್ರ್ಯದ ಅಮೃತಮಹೋತ್ಸವ

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-63,
Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಬಿಜಿಕೆ/ಅಅ(ವಿ)/ಉಲೆನಿ/ಸಲೆ/ಹಿಸ–1/23–24/ 7932-7936 ದಿನಾಂಕ: 25 JAN 2024

**ದಿನಾಂಕ: 27–12–2023 ರಂದು ಮಧ್ಯಾಹ್ನ 03:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ., ಬಾಗಲಕೋಟ ರವರ ಅಧ್ಯಕ್ಷತೆಯಲ್ಲ ಏರ್ಪಡಿಸಿದ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಸಭೆಯ ನಡಾವಳಗಳು.**

ಹಾಜರಿದ್ದವರು: 1) ಶ್ರೀ. ಖಲೀಂ ಅಹಮದ್, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ.

2) ಶ್ರೀ. ಪ್ರಕಾಶ ಪೂಜಗುಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ.

3) ಶ್ರೀ. ಗಿರೀಶ ಕಮಲಕಿಶೋರ ಪಸಾರಿ, ಸಾ॥ ಗುಳೇದಗುಡ್ಡ ಜಿ॥ ಬಾಗಲಕೋಟೆ
ಮೋ: 9743042020

**ಪ್ರಕರಣ ಸಂಖ್ಯೆ: 12/2023**

ಶ್ರೀ. ಗಿರೀಶ ಕಮಲಕಿಶೋರಿ ಪಸಾರಿ
ಪ್ರತಿನಿಧಿ: } ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಹುವಿಸಕಂನಿ., ಗುಳೇದಗುಡ್ಡ } ------- ಪ್ರತಿವಾದಿ

**ವಿಷಯ: "ಶಾಶ್ವತ ವಿದ್ಯುತ್ ಸಂಪರ್ಕ ನೀಡುವ" ಕುರಿತು.**

*****

ಪ್ರಕರಣ ಸಂಖ್ಯೆ: 12/2023 ರಕ್ಕೆ ಸಂಬಂಧಿಸಿದಂತೆ, ದಿನಾಂಕ: 27–12–2023 ರಂದು ಮಧ್ಯಾಹ್ನ 03:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ., ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು/ಅಧಿಕಾರಿಗಳನ್ನು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಶ್ರೀ. ಗಿರೀಶ ಕಮಲಕಿಶೋರ ಪಸಾರಿ, ಸಾ॥ ಗುಳೇದಗುಡ್ಡ ಜಿ॥ ಬಾಗಲಕೋಟೆ ರವರು ದಿನಾಂಕ: 27–12–2023 ರಂದು ನಡೆದ ಸಭೆಯಲ್ಲಿ ನೀಡಿದ ಹೇಳಿಕೆ**

ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ವಿನಂತಿಸಿದರು. ಉಪ-ವಿಭಾಗ ಕಚೇರಿ ಹೆಸ್ಕಾಂ ಗುಳೇದಗುಡ್ಡದಲ್ಲಿ ಸದರೀ ವಿದ್ಯುತ್ ಸಂಪರ್ಕಕಾಗಿ ಅರ್ಜಿಯನ್ನು ಸಲ್ಲಿಸಲಾಗಿರುವದಿಲ್ಲ ಹಾಗೂ ನೊಂದಣಿ ಮಾಡಿರುವದಿಲ್ಲವೆಂದು ತಿಳಿಸಿದರು.

**ಶ್ರೀ. ಪ್ರಕಾಶ ಪೂಜಗುಂಡಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ ರವರು ದಿನಾಂಕ: 27-12-2023 ರಂದು ನಡೆದ ಸಭೆಯಲ್ಲಿ ನೀಡಿದ ಹೇಳಿಕೆ**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹು.ವಿ.ಸ.ಕಂ.ನಿ., ಗುಳೇದಗುಡ್ಡ ರವರು ಸಭೆಯಲ್ಲಿ ಸದರೀ ದೂರುದಾರರು ಇದೂವರೆಗೂ ಉಪ-ವಿಭಾಗ ಕಚೇರಿ ಗುಳೇದಗುಡ್ಡದಲ್ಲಿ ಅರ್ಜಿಯನ್ನು ಸಲ್ಲಿಸಿರುವದಿಲ್ಲ ಹಾಗೂ ನೊಂದಣಿಯೂ ಮಾಡಿರುವದಿಲ್ಲ. ಅಬಾಂಡೆಂಟ್ ಲೇಔಟ್ ಆಗಿರುವದರಿಂದ ಸದರೀ ಲೇಔಟಿನ ಯಾವುದೇ ರೀತಿಯ ಅಭಿವೃದ್ಧಿ ಶುಲ್ಕ ಭರಣಾ ಮಾಡಿರುವದಿಲ್ಲವೆಂದು ತಿಳಿಸಿದರು.

**:: ಆ ದೇ ಶ ::**

**ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/** **ದಿನಾಂಕ:**

ಸದರೀ ದೂರುದಾರರಿಗೆ ಕಾ ಮತ್ತು ಪಾ ಉಪ-ವಿಭಾಗ ಕಚೇರಿ ಗುಳೇದಗುಡ್ಡದಲ್ಲಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿಯೊಂದಿಗೆ ನೋಂದಣಿಗೊಳಿಸಿ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಲು ತಿಳಿಸಲಾಗಿದೆ. ಹಾಗೂ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿ ನೊಂದಣಿಗೊಳಿಸಿ ಅಗತ್ಯ ದಾಖಲೆಗಳನ್ನು ಸಲ್ಲಿಸಿದ ನಂತರವು ವಿದ್ಯುತ್ ಸಂಪರ್ಕ ನೀಡದಿದ್ದಲ್ಲಿ ಗ್ರಾಹಕರ ಕುಂದು ಕೊರತೆ ವೇದಿಕೆಗೆ ದೂರು ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಗುಳೇದಗುಡ್ಡ ರವರಿಗೆ ಸದರೀ ಲೇಔಟ್ ಮಾಲೀಕರ ವಿದ್ಯುತ್ ಮೂಲ ಸೌಕರ್ಯ ಅಭಿವೃದ್ಧಿಪಡಿಸಿಕೊಳ್ಳಲು ಮುಂದೆ ಬರದೇ ಇರದ ಪಕ್ಷದಲ್ಲಿ ಸಂಖ್ಯೆ: ಸಿಐ 141 ಎಸ್.ಪಿ.ಕ್ಯೂ(E) 2022 ದಿನಾಂಕ: 11-01-2022 ಅನುಸಾರ **3.2.5 In case of layouts/sites where the infrastructure of Electric line/ plant is not developed within such layouts/sites by the Developer, the distribution licensee shall arrange power supply to the applicants/consumers by recovering the expenditure from them towards electric line and plant as per Clause 3.2.3 (i), (ii), (iii), (iv) and 3.2.3 (v) NOTE 1 of KERC (Recovery of Expenditure for Supply of Electricity) Regulations, 2004, as amended from time to time.**
ಅಬಾಂಡೆಂಟ್ (Abandent Layout) ಲೇಔಟನ್ ಅಂದಾಜು ಪತ್ರಿಕೆ ತಯಾರಿಸಿ ಮಂಜೂರಾತಿ ಪಡೆದು ಅಭಿವೃದ್ಧಿ ಪಡಿಸಿ ತದನಂತರ ಎಲ್ಲ ನಿವೇಶನಗಳ ಗ್ರಾಹಕರಿಂದ ಅರ್ಜಿ ಪಡೆದು ನಿಗಮದ ನಿಯಮಾನುಸಾರ ನಿವೇಶನದಾರರಿಂದ ಅಭಿವೃದ್ಧಿ ಶುಲ್ಕ ಭರಣಾ ಮಾಡಿಸಿಕೊಂಡು ಮೂಲಭೂತ ಸೌಕರ್ಯ ನಿರ್ಮಿಸಿ ಹಾಲಿ ಇರುವ ವಿದ್ಯುತ್ ಜಾಲದಿಂದ ಶಾಶ್ವತ ವಿದ್ಯುತ್ ಸಂಪರ್ಕ ಒದಗಿಸಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

**ಕಾರ್ಯನಿರ್ವಾಹಕ ಅಭಿಯಂತರರು(ವಿ.),**
**ಹಾಗೂ ಗ್ರಾ.ಕುಂ.ಕೊ.ನಿ., ವೇದಿಕೆಯ**
**ಸದಸ್ಯರು, ಬಾಗಲಕೋಟ.**

24.1.24
**ಅಧ್ಯಕ್ಷರು,**
**(ಶ್ರೀ. ಸಿದ್ದಪ್ಪ ಬಿಂಜಗೇರಿ,)**
**ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ**
**ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ**
**ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.**

**ಪ್ರತಿಯನ್ನು ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:**
ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ.
ಪ್ರತಿ ಅಭಿವಂದನೆಗಳೊಂದಿಗೆ:
ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
ಪ್ರತಿಗಳು ಮಾಹಿತಿಗಾಗಿ:
1) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಗುಳೇದಗುಡ್ಡ.
3) ಶ್ರೀ.ಗಿರೀಶ ಕಮಲಕಿಶೋರ ಪಸಾರಿ, ಸಾ॥ ಗುಳೇದಗುಡ್ಡ ಜಿ॥ ಬಾಗಲಕೋಟೆ ಮೋ ಸಂ: 9743042020.
ಕಛೇರಿ ಪ್ರತಿ/ಪ್ರಧಾನ ಕಡತ.